**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಸತ್ರ ಪ್ರಕರಣ ಸಂಖ್ಯೆ 65/2024**

ಪಿರ್ಯಾದಿ : ರಾಜ್ಯದ ಪರವಾಗಿ
ಎಂ ಕೆ ದೊಡ್ಡಿ ಆರಕ್ಷಕ ಠಾಣೆ.

**ವಿರುದ್ಧ**

ಆರೋಪಿತರು : 1. ಕುಮಾರ್ ಮತ್ತು ಇತರರು

**ದೋಷಾರೋಪಣೆ**

ನಾನು, ಶ್ರೀ ಎಸ್.ಎ. ಹಿದಾಯತ್ ಉಲ್ಲಾ ಷರೀಫ್., ಬಿ.ಎ., ಎಲ್.ಎಲ್.ಎಂ., IIIನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ, ಈ ಮೂಲಕ ನಿಮ್ಮನ್ನು ಈ ಕೆಳಗೆ ಹೇಳಿದಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ಆರೋಪಿ- :
1. ಕುಮಾರ್ ಬಿನ್ಃ ಲೇಟ್ ರಾಮೇಗೌಡ
ವಯಸ್ಸುಃ 35 ವರ್ಷ, **(ಮೃತಪಟ್ಟಿರುತ್ತಾರೆ.)**

2. ಬಸವಲಿಂಗ @ ಬಸವಲಿಂಗೇಗೌಡ,
ಬಿನ್ ಮಲ್ಲೇಗೌಡ,
ವಯಸ್ಸುಃ 52 ವರ್ಷ,

3. ಲಕ್ಷ್ಮಿ ಕೋಂ ಬಸವಲಿಂಗ @ ಬಸವಲಿಂಗೇಗೌಡ,
ವಯಸ್ಸುಃ 50 ವರ್ಷ,

ಎಲ್ಲರೂ ವಾಸ ಃ ಮಾಕಳಿ ಗ್ರಾಮ,
ಮಳೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

*******

**ಮೊದಲನೆಯದಾಗಿ**, ದಿಃ 28.05.2023 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಎಂ ಕೆ ದೊಡ್ಡಿ ಪೋಲೀಸ್ ಠಾಣಾ ಸರಹದ್ದಿನ ಚನ್ನಪಟ್ಟಣ ತಾಲ್ಲೂಕು ಮಳೂರು ಹೋಬಳಿ, ಮಾಕಳಿ ಗ್ರಾಮದಲ್ಲಿ 2 ನೇ ಆರೋಪಿಯಾದ ಬಸವಲಿಂಗೇಗೌಡ ರವರ ಅಂಗಡಿ ಮನೆಯ ಮುಂಭಾಗದ ರಸ್ತೆಯಲ್ಲಿ ನಿಮ್ಮ ಪೈಕಿ ಆರೋಪಿ 2 ಮತ್ತು 3 ರವರ ಮಗಳನ್ನು ವಿವಾಹ ಅಗಿರುವ ಚಾಸಾ 2 ಎಂ ಕೆ ರವಿರವರು ಆಕೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎನ್ನುವ ವಿಚಾರದಲ್ಲಿ ದ್ವೇಷ ಹೊಂದಿದ್ದ ಆರೋಪಿ 2 ಮತ್ತು 3 ನೀವು ನಿಮ್ಮ ಸಂಬಂಧಿಯಾದ ಈಗ ಮೃತಪಟ್ಟಿರುವ 1 ನೇ ಆರೋಪಿ ಕುಮಾರ ಎಂ ಆರ್ ರವರ ಜೊತೆ ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 1 ನೇ ಆರೋಪಿಯು ರಿಪೀಸ್ ಪಟ್ಟಿಯನ್ನು ಹಿಡಿದುಕೊಂಡು ಹಿಂದಿನಿಂದ ಬಂದು ಚಾಸಾ 2 ಎಂ ಕೆ ರವಿರವರ ತಲೆಯ

ಹಿಂಭಾಗಕ್ಕೆ ರಿಪೀಸ್ ಪಟ್ಟಿಯಿಂದ ಹೊಡೆದು ರಕ್ತಗಾಯ ಉಂಟು ಮಾಡಿದ್ದು, ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ, **ಕಲಂ 324 ಜೊತೆಗೆ 34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

**ಎರಡನೆಯದಾಗಿ,** ಮೇಲೆ ಕಾಣಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿ 2 ಮತ್ತು 3 ಆದ ನೀವು ಈಗ ಮೃತ ಪಟ್ಟಿರುವ 1ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 2ನೇ ಆರೋಪಿ ಬಸವಲಿಂಗೌಡರವರು ಚಾಸಾ 2 ರವಿ ಎಂ ಕೆ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕಲ್ಲಿನಿಂದ ಚಾಸಾ 2 ರವರ ತಲೆಗೆ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದ್ದು ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ, **ಕಲಂ 307 ಜೊತೆಗೆ 34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

**ಮೂರನೆಯದಾಗಿ,** ಮೇಲೆ ಕಾಣಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿ 2 ಮತ್ತು 3 ಆದ ನೀವು ಈಗ ಮೃತ ಪಟ್ಟಿರುವ 1ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 2ನೇ ಆರೋಪಿ ಬಸವಲಿಂಗೌಡರವರು ಚಾಸಾ 2 ರವಿ ಎಂ ಕೆ ರವರಿಗೆ ಕಲ್ಲಿನಿಂದ ಚಾಸಾ 2 ರವರ ತಲೆಗೆ ಹೊಡೆದು ತೀವ್ರ ಸ್ವರೂಪದ ಗಾಯ ಪಡಿಸಿದ್ದು, ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ, **ಕಲಂ 326 ಜೊತೆಗೆ 34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

**ನಾಲ್ಕನೆಯದಾಗಿ,** ಮೇಲೆ ಕಾಣಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿ 2 ಮತ್ತು 3 ಆದ ನೀವು ಈಗ ಮೃತ ಪಟ್ಟಿರುವ 1 ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 3ನೇ ಆರೋಪಿ ಲಕ್ಷ್ಮಿರವರು ಚಾಸಾ 2 ರವಿ ಎಂ ಕೆ ರವರನ್ನು ಕುರಿತು " ನೀನು ಇದ್ದರೆ ತಾನೇ ನನ್ನ ಮಗಳಿಗೆ ತೊಂದರೆ ಕೊಡುವುದು ಸತ್ತು ಹೋಗು ಸೂಳೆ ಮಗನೇ" ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗ ಉಂಟು ಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದ್ದು, ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ, **ಕಲಂ 504 ಜೊತೆಗೆ 34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

**ಐದನೆಯದಾಗಿ,** ಮೇಲೆ ಕಾಣಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿ 2 ಮತ್ತು 3 ಆದ ನೀವು ಈಗ ಮೃತ ಪಟ್ಟಿರುವ 1 ನೇ ಆರೋಪಿಯೊಂದಿಗೆ ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 3ನೇ ಆರೋಪಿ ಲಕ್ಷ್ಮಿರವರು ಚಾಸಾ 2 ರವಿ ಎಂ ಕೆ ರವರಿಗೆ ಕೈಗಳಿಂದ ಹೊಡೆದು ಸ್ವ ಇಚ್ಛೆಯಿಂದ ನೋವು ಉಂಟು ಮಾಡಿದ್ದು ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ, **ಕಲಂ 323 ಜೊತೆಗೆ 34** ರನ್ವಯ ಈ ನ್ಯಾಯಾಲಯದ

ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

ನಾನು ನಿಮ್ಮನ್ನು ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆ ಆಗತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕ: 02.06.2026.

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್)
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಸತ್ರ ಪ್ರಕರಣ ಸಂಖ್ಯೆ 65/2024**

ಪಿರ್ಯಾದಿ : ರಾಜ್ಯದ ಪರವಾಗಿ
ಎಂ ಕೆ ದೊಡ್ಡಿ ಆರಕ್ಷಕ ಠಾಣೆ.

**ವಿರುದ್ಧ**

ಆರೋಪಿತ : 2. ಬಸವಲಿಂಗ @ ಬಸವಲಿಂಗೇಗೌಡ

**ದೋಷಾರೋಪಣೆ**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?

ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

(ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತ್ತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 02.06.2026.

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್ )
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**ಆರೋಪಿಯ ಸಹಿಃ**

**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಸತ್ರ ಪ್ರಕರಣ ಸಂಖ್ಯೆ 65/2024**

ಪಿರ್ಯಾದಿ : ರಾಜ್ಯದ ಪರವಾಗಿ
ಎಂ ಕೆ ದೊಡ್ಡಿ ಆರಕ್ಷಕ ಠಾಣೆ.

**ವಿರುದ್ಧ**

ಆರೋಪಿತ : 3. ಲಕ್ಷ್ಮಿ

**ದೋಷಾರೋಪಣೆ**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?

ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

(ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತ್ತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 02.06.2026.

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್ )
III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**ಆರೋಪಿಯ ಸಹಿಃ**